ಜಾಹ್ನವಿ ಆನಂದ ಹಳ್ಳೂರ

# ಮೊಗಹೊತ್ತಿಗೆಯ ವಿವಿಧ ಮುಖಗಳು

ಹಂಗ ಮೊಗಹೊತ್ತಿಗ್ಯಾಗ ಬ್ಯಾರೆ ಬ್ಯಾರೆ ಫೋಟೊಗಳನ್ನ ಗೊತ್ತು ಗುರಿಯಿಲ್ಲದ ನೋಡಿಕೋಽತ ಸಮಯ ಕೊಲ್ಲಲಿಕತ್ತಿದ್ದೆ. ನಾಳೆ ಹಬ್ಬ. ಮಾಡಲಿಕ್ಕೆ ಗುಡ್ಡದಷ್ಟು ಕೆಲಸಾ ಬಿದ್ದಿತ್ತು... ಆ ಕೆಲಸದ ಗುಡ್ಡಾ ಯಾರಿಗೆ ಬೇಕು? ಸಕ್ಕರೀ ಗುಡ್ಡದ(ನಾನು ಫೇಸ್‌ಬುಕ್‌ನ ಝುಕರ್ ಬರ್ಗ್‌ನ ಹಂಗಽ ಕರೀತೇನಿ) ಸೆಳೆತನಽ ಜೋರಾಗಿತ್ತು. ಕೆಲಸ ಬಿದ್ದರ ಬೀಳಲಿ ಬಿಡು... ಅತ್ಲಾಗ! ಈ ನನ್ನ ಫೋಟೊಕ್ಕ ಎಷ್ಟು ಲೈಕು ಬಿದ್ದಾವ,ಯಾರ್‍ಯಾರು ಲೈಕು ಮಾಡ್ಯಾರ ಅಂತ ನೋಡಿ ನೋಡಿ ಅವರ ಪ್ರೊಫೈಲಿಗೆ ಹೋಗಿ ಹೋಗಿ ಕಾಂಪ್ಲಿಮೆಂಟರಿ ಅಂತ ಹೇಳೀ ಹೇಳೀ ಅವರದೂ ಯಾವುದರ ಫೋಟೊಕ್ಕ ಲೈಕು ಒತ್ತಲಿಕತ್ತಿದ್ದೆ. ಆಗಲೇ, ಯಾವುದೋ ಕಾಲದಾಗ ಬಸ್ಸಿನ್ಯಾಗ ಸಾಲಿಗೆ ಹೋಗುವಾಗ ಜೋಡಿ ಬರುತ್ತಿದ್ದ ಯುಕ್ತಾಳ ಪ್ರೊಫೈಲಿನ್ಯಾಗ ಇನ್ನೊಂದು ಫೋಟೊ ಕಾಣಿಸಿತು. ಎಲಾ ಇವನಽ... ಈ ಮಾರೆಲ್ಲೋ ನೋಡಿಧಾಂಗ ಕಾಣಿಸ್ತದಲ್ಲ?... ಅಯ್ಯಯ್ಯೋ! ಇಕಿ ನನ್ನ ಪ್ರಾಣದ ಗೆಳತಿ ಶುಭಶ್ರೀ, ಅಲ್ಲೇನೂ? ಎಂದು ಮನಸ್ಸಿನ್ಯಾಗ ಸಂತೋಷ ಪುಟೀತು. ಮೂವತ್ತು ವರ್ಷಗಳ ಹಿಂದಿನ ನಮ್ಮ ಸ್ನೇಹ ಕಣ್ಣ ಮುಂದಽ ಬಂದು ನಿಂತಿತು. ಪ್ರೇಮ ಬಿದ್ದು... ಎದ್ದು ವಿವಾಹದಾಗ ಬಿದ್ದು ಅಮೆರಿಕಾಕ್ಕ ಓಡಿ ಬಂದಿದ್ದ ಇಕೀನ್ನ ನಾ ಎಷ್ಟ್ ಹುಡುಕಿದ್ದೆ! ಈಗ ಒಂದಽ ಕ್ಲಿಕ್ಕಿನ್ಯಾಗ ನನಗ ಸಿಕ್ಕಳೆಂದರಽ, ಕಣ್ಣಾಗ ನೀರು ಒಸರಿತು. ಈ ಸಕ್ಕರೀ ಗುಡ್ಡ ಭಾಳ ಧೊಡ್ಡ ಧೊಡ್ಡ ಮಂದೀನ್ನಽ ಆಳಿಶ್ಯಾನ. ನಾನೂ ಅತ್ತು ಧೊಡ್ಡ ಮಂದೀ ಒಳಗ ಬಂದೆ. ಅಲ್ಲರೀ?... ನಮ್ಮ ಪ್ರಧಾನ ಮಂತ್ರಿಗಳಽ, ಮಹಾವ್ಯಾಪಾರಿ ಸಕ್ಕರೀಗುಡ್ಡನ ಮುಂದ ಭಾವಾವಿಷ್ಟರಾದ ಮ್ಯಾಲೆ ನನ್ನಂತಹ ಯಃಕಶ್ಚಿತ್ತಿನ ಗತಿಯೇನು?ಆದರೂ 'ಸಕ್ಕರೀ ಗುಡ್ಡ'ನ ಮುಂದ ಅತ್ತಿದ್ದು ಸುಂಕದವನ ಮುಂದ ದುಃಖ ಹೇಳಿಕೊಂಢಾಂಗ ಅನಿಸಿತು. ಹಿಂದಿನ ತ್ರಾಸು ಮರೀಬಾರದರಿ ಆದರ ಹಿಂದಿನ ಕಷ್ಟಾ ನೆನೆಸಿ ಅಳಬಾರದರೀ. ಆ ಕಷ್ಟನಽ ನಮ್ಮನ್ನ ಇಲ್ಲೀತನಕಾ ತಂದು ಮುಟ್ಟಿಸಿರತದ. ಇರಲಿ ಬಿಡರಿ. ನೀಮ್ಮ ಫೇಸೂ ಈ ಬುಕ್ಕಿನ್ಯಾಗ ಇದ್ದರ ನೀವೂ ಭಾಳ ಸರತೇ ಟಾಯಿಮ್ ಕೊಚ್ಚಿ ಕೊಚ್ಚಿ ಕೊಲ್ಲತಿರತೀರಿ. ನನಗ ಗೊತ್ತದ. ಸಮಯ